ಇ) ಪ್ರಶ್ನೆ 'ಅ' ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ 'ಆ' ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹುಬ್ಬಳ್ಳಿ ತಹಸೀಲ್ದಾರರ ಹಾಗೂ ಕಾರ್ಯಾಲಯ ಬೇರ್ಪಡಿಸುವ ಬಗ್ಗೆ

204 (578) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಬ್ಬಳ್ಳಿ ತಹಸೀಲ್ದಾರ್ ಕಾರ್ಯಾಲಯದಲ್ಲಿ ಕೆಲಸದ ಒತ್ತಡ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅಂದಾಜು 7.00 ಲಕ್ಷ ಜನಸಂಖ್ಯೆಯಿರುವ ನಗರದಲ್ಲಿ ಒಂದೇ ತಹಶೀಲ್ದಾರರ ಕಛೇರಿಯಿದ್ದು ಇದರಿಂದ ನಾಗರೀಕರಿಗೆ ತೊಂದರೆ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ಹುಬ್ಬಳ್ಳಿ ಶಹರದಲ್ಲಿರುವ ತಹಸೀಲ್ದಾರ್ ಕಛೇರಿಯನ್ನು ಉತ್ತರ ವಲಯ ಹಾಗೂ ದಕ್ಷಿಣ ವಲಯ ಎಂದು ಬೇರ್ಪಡಿಸಿ ಎರಡು ತಹಸೀಲ್ದಾರ್ ಕಾರ್ಯಾಲಯಗಳನ್ನು ಅಸ್ತಿತ್ವಕ್ಕೆ ತರುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಹಾಗಿದ್ದಲ್ಲಿ, ಬೇರ್ಪಡಿಸುವ ಈ ಪ್ರಕ್ರಿಯೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಬಂದಿರುತ್ತದೆ.

ಆ) ಬಂದಿರುತ್ತದೆ.

ಇ) ಈ ಬಗ್ಗೆ ಸರಕಾರವು ಅನುಸರಿಸುತ್ತಿರುವ ಮಾನದಂಡಗಳನ್ನು ಸದರಿ ಪ್ರಸ್ತಾವನೆಯು ಪೂರೈಸುತ್ತಿಲ್ಲವಾದುದರಿಂದ, ಇದನ್ನು ಸದ್ಯಕ್ಕೆ ಹಿಪ್ಪಲು ಸಾಧ್ಯವಾಗುತ್ತಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆಗಳಲ್ಲಿ ಉದ್ದಿಮೆದಾರರಿಗೆ ನೀಡಿರುವ ಜಾಗ

206 (345) ಶ್ರೀ ಜಯಪ್ರಕಾಶ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ನಗರ : ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಸಂಸ್ಥೆ; ಉದ್ಯಮಗಳಿಗೆ ಅಥವಾ ಉದ್ದಿಮೆದಾರರಿಗೆ ವ್ಯಾಪಾರ ಮತ್ತು ಕೈಗಾರಿಕಾ ಪ್ರದೇಶ ಕೇಂದ್ರಗಳಿಗೆ ತಲಾ ಎಷ್ಟು ಜಾಗವನ್ನು ನೀಡಲಾಗಿದೆ;

ಆ) ಯಾವ ಆಧಾರದ ಮೇಲೆ ನೀಡಲಾಗಿದೆ ಶುದ್ಧ ಕ್ರಯವೇ, ಗುತ್ತಿಗೆಯೇ ಅಥವಾ ಬಾಡಿಗೆಯೇ (ವಿವರ ನೀಡುವುದು)

ಇ) ಸರ್ಕಾರವು ಸದರಿ ಜಮೀನನ್ನು ಯಾವ ಯಾವ ಹಂತದಲ್ಲಿ ಹಾಗೂ ಯಾವ ಆಧಾರ ಮತ್ತು ಮಾನದಂಡದ ಮೇಲೆ ಸ್ವಾಧೀನ ಪಡಿಸಿಕೊಂಡಿದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ತಃಖ್ತೆ ಲಗತ್ತಿಸಿದೆ.

ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ, ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ನಮೂದಿಸಿರುವ ತಾಲ್ಲೂಕುಗಳಲ್ಲಿ ಇರುವ ಸರ್ಕಾರಿ ಜಮೀನನ್ನು ಸಂಘ ಸಂಸ್ಥೆಗಳಿಗೆ ಒಟ್ಟು 962–11 ಎಕರೆ/ಗುಂಟೆ ವಿಸ್ತೀರ್ಣವನ್ನು ಸರ್ಕಾರದ ಅನುಮೋದನೆಯ ಮೇರೆಗೆ ಮಂಜೂರು/ಗುತ್ತಿಗೆ ಆಧಾರದ ಮೇಲೆ ನೀಡಿದೆ. ವಿವರವಾದ ಪಟ್ಟಿ ಲಗತ್ತಿಸಿದೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಮಂಜೂರಿ/ಗುತ್ತಿಗೆ ಒಟ್ಟು ವಿಸ್ತೀರ್ಣ ಎಕರೆ / ಗುಂಟೆ
1.	ಬೆಂಗಳೂರು ಉತ್ತರ	142–07
2.	ಬೆಂಗಳೂರು ಉತ್ತರ (ಅಪರ)	167–21
3.	ಬೆಂಗಳೂರು ದಕ್ಷಿಣ	362–12
4.	ಬೆಂಗಳೂರು ಪೂರ್ವ	282–11
5.	ಆನೇಕಲ್	8–00
	ಒಟ್ಟು	**962-11**

ಆ) ಯಾವ ಆಧಾರದ ಮೇಲೆ ನೀಡಲಾಗಿದೆಯೆನ್ನುವುದನ್ನು ತಃಖ್ತೆಯಲ್ಲಿ ವಿವರಿಸಲಾಗಿದೆ ಹಾಗೂ ಅದನ್ನು ಲಗತ್ತಿಸಲಾಗಿದೆ.

ವಿವರಗಳುಳ್ಳ ಪಟ್ಟಿಯನ್ನು ಲಗತ್ತಿಸಿದೆ.

	ಮಂಜೂರಿ		ಗುತ್ತಿಗೆ	
	ಪ್ರಕರಣ ಸಂಖ್ಯೆ	ವಿಸ್ತೀರ್ಣ ಎ/ಗುಂ	ಪ್ರಕರಣ ಸಂಖ್ಯೆ	ವಿಸ್ತೀರ್ಣ ಎ/ಗುಂ
1. ಬೆಂಗಳೂರು ಉತ್ತರ	16	35–29	10	106–18
2. ಬೆಂಗಳೂರು ಉತ್ತರ (ಅಪರ)	09	167–21	–	–
3. ಬೆಂಗಳೂರು ದಕ್ಷಿಣ	11	174–01	17	188–11
4. ಬೆಂಗಳೂರು ಪೂರ್ವ	09	50–10	09	232–01
5. ಆನೇಕಲ್	02	7–13	02	0–27
ಒಟ್ಟು	**47**	**434-34**	**38**	**527-17**

ಇ) ಭೂ ಕಂದಾಯ ಹಾಗೂ ಭೂ ಮಂಜೂರಾತಿ ನಿಯಮಗಳ ಪ್ರಕಾರ ಮಂಜೂರು ಮಾಡಲಾಗಿದೆ.

ಬೆಂಗಳೂರು ಜಿಲ್ಲೆಗೆ ಸಂಬಂಧಿಸಿದಂತೆ ಉದ್ದೆಮೇದಾರರಿಗೆ ಕೈಗಾರಿಕೆ ಉದ್ದೇಶಕ್ಕಾಗಿ ಸರ್ಕಾರಿ ಜಮೀನನ್ನು ಮಂಜೂರು ಮಾಡಿರುವುದಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ (ಕೆ.ಐ.ಎ.ಡಿ.ಬಿ) ಯಿಂದ ಪಡೆಯಬಹುದಾಗಿದೆ.

ಕ್ರ. ಸಂ.	ತಾಲ್ಲೂಕಿನ ಹೆಸರು	ಮಂಜೂರು ಮಾಡಿರುವ ಸಂಸ್ಥೆ/ಉದ್ದಿಮೆ/ ಕೈಗಾರಿಕೆ ಹೆಸರು	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ–ಗುಂಟೆ	ಮಂಜೂರಾತಿ ಕ್ರಯ/ ಗುತ್ತಿಗೆ/ ಬಾಡಿಗೆ
1	2	3	4	5	6	7
1.	ಬೆಂಗಳೂರು ಉತ್ತರ ತಾಲ್ಲೂಕು	1. ಮಾತೃ ಎಜುಕೇಷನ್ ಸೊಸೈಟಿ	ಸೋಮಶೆಟ್ಟಿಹಳ್ಳಿ	20	5–00	ಗುತ್ತಿಗೆ
				25	3–00	
		2. ಡೆಕ್ಕನ್ ಎಜುಕೇಷನ್ ಸೊಸೈಟಿ	ಶೆಟ್ಟಿಹಳ್ಳಿ	59	5–00	ಗುತ್ತಿಗೆ
		3. ಆಕ್ಸಫರ್ಡ್ ವಿದ್ಯಾಸಂಸ್ಥೆ	ಹೇರೋಹಳ್ಳಿ	64	9–05	ಗುತ್ತಿಗೆ
		4. ಪಂಚಮಟಿ ಎಜುಕೇಷನ್ ಟ್ರಸ್ಟ್	ಅಮಾನಿಕೆರೆ	28	1–14	ಗುತ್ತಿಗೆ
			ಹೇರೋಹಳ್ಳಿ	67	3–11	ಮಂಜೂರಾತಿ
		5. ವಿಶ್ವಬಂಧು ವಿದ್ಯಾಸಂಸ್ಥೆ	ಚಿಕ್ಕಸಂದ್ರ	15	5–00	ಗುತ್ತಿಗೆ
		6. ತಿರುಪತಿ ವಿದ್ಯಾಸಂಸ್ಥೆ	ಲಿಂಗದೇವರಹಳ್ಳಿ	18	6–00	ಮಂಜೂರಾತಿ
		7. ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವ ವಿದ್ಯಾನಿಲಯ	ಲಗ್ಗೆರೆ	200	4–00	ಮಂಜೂರಿ
		8. ಬೆಂ. ಮಹಾನಗರ ಪಾಲಿಕೆಗೆ	ಹೆಬ್ಬಾಳ	56	4–18	ಮಂಜೂರಿ
		9. ಬಸವೇಶ್ವರ ಲಿಟಲ್ ಫ್ಲವರ್	ಗಿಡದಕೋನೇನ ಹಳ್ಳಿ	38 ಮತ್ತು 39	4–00	ಶೈಕ್ಷಣಿಕ

1	2	3	4	5	6	7
		10. ಬುದ ಎಜುಕೇಷನ್ ಟ್ರಸ್ಟ್	ಗಿಡದಕೋನೆನ ಹಳ್ಳಿ	38	6–00	ಮಂಜೂರಾತಿ
		11. ಮಹಾ ಬಲೇಶ್ವರ ಸರ್ವೀಸ್ ಸ್ಟೇಷನ್	ಸಂಪಿಗೇಹಳ್ಳಿ	5	0–09.2	ಗುತ್ತಿಗೆ
		12. ಶ್ರೀರಾಘವೇಂದ್ರ ಎಜುಕೇಷನಲ್ ಇನ್ಸ್ಟಿಟ್ಯೂಟ್ಯೂಷನ್ ಸೊಸೈಟಿ (ರಿ)	ಚಿಕ್ಕಬಾಣಾವರ	57	2–00	ಗುತ್ತಿಗೆ
		13. ಸುಬ್ರಹ್ಮಣ್ಯ ಎಜುಕೇಷನ್ ಟ್ರಸ್ಟ್	ಹೇರೋಹಳ್ಳಿ	63	8–00	ಮಂಜೂರಾತಿ
		14. ಶ್ರೀನಿವಾಸ ಎಜುಕೇಷನ್ ಟ್ರಸ್ಟ್	ಚಿಕ್ಕಬಾಣಾವರ	57	10–00	ಗುತ್ತಿಗೆ
		15. ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ ವಾಹನ ಚಾಲಕರ ಮತ್ತು ಡಿ ಗ್ರೂಪ್ ನೌಕರರ ಸಂಘಕ್ಕೆ	ಶ್ರೀಗಂಧದಕಾವಲು	46	5–00	ಮಂಜೂರಿ
		16. ಶ್ರೀ ರಾಘವೇಂದ್ರ ಎಜುಕೇಷನಲ್ ಇನ್ಸಿಟ್ಯೂಟ್ ಸೊಸೈಟಿ (ರಿ)	ಚಿಕ್ಕಬಾಣಾವರ	57	5–00	ಗುತ್ತಿಗೆ
		17. ಕೆ.ಎನ್. ನವೀನ್ ಮ್ಯಾನೇಜಿಂಗ್ ಟ್ರಸ್ಟ್, ಬಸವೇಶ್ವರ ಟ್ರಸ್ಟ್	ಅಡಕಮಾರನ ಹಳ್ಳಿ	30	0–30	ಗುತ್ತಿಗೆ

1	2	3	4	5	6	7
		18. ಮೂಡಲಗೆರೆ ಎಜುಕೇಷನ್ ಟ್ರಸ್ಟ್	ಗೌಡಹಳ್ಳಿ	57, 58	12–00	ಗುತ್ತಿಗೆ
		19. ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ (ರಿ)	ನಗರೂರು	112	16–00	ಗುತ್ತಿಗೆ
		20. ಪಂಚವಟಿ ಟ್ರಸ್ಟ್ (ರಿ)	ಹುಚ್ಚನಪಾಳ್ಯ	08	6–00	ಗುತ್ತಿಗೆ
		21. ಮಿಲೇನಿಯಂ ಶಿಕ್ಷಣ ಸಂಸ್ಥೆ	ಶಿವನಪುರ	7, 8	10–00	ಗುತ್ತಿಗೆ
		22. ಗೌತಮ ವೈದ್ಯಕೀಯ ವಿಜ್ಞಾನ ಟೆಕ್ನಾಲಜಿ	ದಾಸನಪುರ	100	6–00	ಗುತ್ತಿಗೆ
		23. ಶ್ರೀನಾರಾಯಣ ಧರ್ಮ ಪರಿಪಾಲನಾ ಯೋಗ ವಿದ್ಯಾ ಸಂಸ್ಥೆ	ತಮ್ಮೇನಹಳ್ಳಿ	19	5–00	ಗುತ್ತಿಗೆ
		ಒಟ್ಟು			**142–07**	
2.	ಬೆಂಗಳೂರು ಉತ್ತರ (ಅಪರ)	1. ಕರ್ನಾಟಕ ಬಾಡಿಗೆದಾರರ ಕ್ಷೇಮಾಭಿವೃದ್ಧಿ ಕೇಂದ್ರ ಸಮಿತಿ	ಮೇಡಿ ಅಗ್ರಹಾರ	24	48–00	ಮಂಜೂರಿ
		2. ಕರ್ನಾಟಕ ಚಿತ್ರಕಲಾ ಪರಿಷತ್	ಆವಲಹಳ್ಳಿ ಸಿಂಗನಾಯಕನ ಹಳ್ಳಿ	10 64	13–01	ಮಂಜೂರಿ
		3. ಚಿಲ್ಡ್ರನ್ ಲೈವ್ ಕ್ಯಾಸ್ರಲ್ ಟ್ರಸ್ಟ್ ಬೆಂಗಳೂರು	ಜಕ್ಕೂರು	95	0–10	ಮಂಜೂರಿ
		4. ಬೆಂಗಳೂರು ಮಹಾನಗರ ಪಾಲಿಕೆ	ಮಾವಳ್ಳಿಪುರ	8	100–00	ಮಂಜೂರಿ

1	2	3	4	5	6	7
		5. ಶ್ರೀ ಕಂಠೀರವ ಪ್ರಗತಿ ವಿದ್ಯಾ ಸಂಸ್ಥೆ	ಅಮೃತಹಳ್ಳಿ	139	1–00	ಮಂಜೂರಿ
		6. ಶ್ರೀ ಶಾರದಾ ವಿದ್ಯಾ ಸಂಸ್ಥೆ	ಚಿಕ್ಕಬೆಟ್ಟಹಳ್ಳಿ	14	2–00	ಮಂಜೂರಿ
		7. ಸೌಹಾರ್ದ ಮಂಟೇಸರಿ ಮತ್ತು ಪ್ರೈಮರಿ ಶಾಲೆ	ಚಿಕ್ಕಬೆಟ್ಟಹಳ್ಳಿ	14	2–00	ಮಂಜೂರಿ
		8. ಪ್ರಗತಿ ವಿದ್ಯಾ ಸಂಸ್ಥೆ	ಜಕ್ಕೂರು	95	0–10	ಮಂಜೂರಿ
		9. ಮಾತೃ ಅಂದರ ವಿದ್ಯಾಸಂಸ್ಥೆ	ಶ್ರೀನಿವಾಸಪುರ	22	1–00	ಮಂಜೂರಿ
	ಒಟ್ಟು				**167–21**	
3.	ಬೆಂಗಳೂರು ದಕ್ಷಿಣ ತಾಲ್ಲೂಕು	1. ಪತಾಂಜಲಿ ಯೋಗಾಶ್ರಮ ಟ್ರಸ್ಟ್	ಬಿ.ಎಂ.ಕಾವಲ್	67	10–00	ಮಂಜೂರಾತಿ
		2. ಬೆಂ. ನೀರು ಸರಬರಾಜು ಒಳ ಚರಂಡಿ ಮಂಡಳಿ	ಕೊತ್ತನೂರು	87	2–06	ಮಂಜೂರು
		3. ಆದಿಚುಂಚನಗಿರಿ ಟ್ರಸ್ಟ್	ಕೆಂಗೇರಿ	67	8–00	ಮಂಜೂರು
		4. ಮಾನನ ಸೇವಾ ಕೇಂದ್ರ	ಉತ್ತರಿ	112	5–00	ಮಂಜೂರು
		5. ವಿಜ್ಞಾನ ನಗರ ಹಾಗೂ ಮ್ಯೂಸಿಯಂ	ತರಳು	55	100–00	ಮಂಜೂರು
		6. ತರಳು ಜಗದ್ಗುರು ವಿದ್ಯಾಸಂಸ್ಥೆ	ಗಣಪತಿಹಳ್ಳಿ	30	8–00	ಗುತ್ತಿಗೆ
		7. ವಿದ್ಯಾಸಂಸ್ಥೆ	ದೊಡ್ಡ ತೋಗೂರು	104 105	15–00	ಗುತ್ತಿಗೆ
		8. ಇಸ್ಕಾನ್ ವಿದ್ಯಾ	ವಸಂತಪುರ	55	28–15	ಗುತ್ತಿಗೆ

1	2	3	4	5	6	7
		9. ನ್ಯಾಷನಲ್ ಎಜುಕೇಷನ್ ಟ್ರಸ್ಟ್	ಸಾರಕ್ಕಿ ಹೊಸಕೆರೆಹಳ್ಳಿ	73 52	0–30 15–00	ಗುತ್ತಿಗೆ ಮಂಜೂರಿ
		10. ರಿಜನಲ್ ಇನ್ಸ್ಟಿಟ್ಯೂಟ್ ನಗರಾಭಿವೃದ್ಧಿ ಇಲಾಖೆಗೆ	ಕೊತ್ತನೂರು	46	12–00	ಮಂಜೂರಿ
		11. ವೇದವಿಜ್ಞಾನ ಮಹಾವಿದ್ಯಾಪೀಠ ಸಂಸ್ಥೆ	ಬಿ.ಎಂ. ಕಾವಲ್	135	19–00	ಗುತ್ತಿಗೆ
		12. ಪ್ರಮೋದ ಎಜುಕೇಷನ್ ಟ್ರಸ್ಟ್	ಚೂಡೇನಮರ	14	4–00	ಗುತ್ತಿಗೆ
		13. ಹೊನ್ನಮ್ಮದೇವಿ ಚಾರಿಟೇಬಲ್ ಟ್ರಸ್ಟ್	ಸಾರಕ್ಕಿ	73	0–30	ಗುತ್ತಿಗೆ
		14. ಪದ್ಮನಾಭನಗರ ವನಿತಾ ಸಮಾಜ (ರಿ)	ಕದಿರೇನಹಳ್ಳಿ	45	0–01.1	ಗುತ್ತಿಗೆ
		15. ರಾಜ್ಯ ಒಕ್ಕಲಿಗರ ಡೈರೆಕ್ಟರಿ	ಹಲಗೇವಡೇರಹಳ್ಳಿ	283	1–11	ಮಂಜೂರಿ
		16. ಆದಿಚುಂಚನಗಿರಿ ಟ್ರಸ್ಟ್	ರಾಮೋಹಳ್ಳಿ	43	16–00	ಗುತ್ತಿಗೆ
		17. ಸಾಯಿ ವಿದ್ಯಾ ಮಂದಿರ	ಹಿಬ್ಬಲೂರು	24	0–20	ಗುತ್ತಿಗೆ
		18. ಕೋಣನಕುಂಟೆ ಗಾರ್ಡನ್ ಎಜುಕೇಷನ್ ಸೊಸೈಟಿ	ಅಗರ	28	10–00	ಮಂಜೂರಿ
		19. ನ್ಯೂ ಭಾರತ್ ಎಜುಕೇಷನಲ್	ಕೋಡಿಚಿಕ್ಕನಹಳ್ಳಿ	9,	0–35	ಗುತ್ತಿಗೆ

1	2	3	4	5	6	7
		20. ಬಿಲ್ವಾ ಎಜುಕೇಷನ್ ಟ್ರಸ್ಟ್	ಹುಳಿಮಾವು	63	2–08	ಮಂಜೂರಿ
		21. ಜಗನ್ನಾಥ ಟೆಂಪಲ್	ಅಗರ	11	0–161/2	ಮಂಜೂರಿ
		22. ಆದಿಚುಂಚನಗಿರಿ ಟ್ರಸ್ಟ್	ಕೆಂಗೇರಿ	69	12–00	ಗುತ್ತಿಗೆ
		23. ಲಯನ್ ಸರ್ವೀಸ್ ಫೌಂಡೇಷನ್ ಸಂಸ್ಥೆ	ಕೆಂಗೇರಿ	69	5–00	ಗುತ್ತಿಗೆ
		24. ನ್ಯೂ ಕೇಂಬ್ರಿಡ್ಜ್ ಎಜುಕೇಷನ್ ಟ್ರಸ್ಟ್	ಕೆಂಗೇರಿ	69	5–00	ಗುತ್ತಿಗೆ
		25. ಮಾಚಿದೇವ ವಿಶ್ವಸ್ಥ ಸಮಿತಿ ಟ್ರಸ್ಟ್	ಚೂಡೇನಪುರ	52	6–00	ಗುತ್ತಿಗೆ
		26. ಆದಿಚುಂಚನಗಿರಿ ಟ್ರಸ್ಟ್ (ಗೋಶಾಲೆ)	ಕಂಬಿಪುರ	43	45–00	ಗುತ್ತಿಗೆ
		27. ಭೀಮಚಂದ್ರ ಎಜುಕೇಷನ್ ಟ್ರಸ್ಟ್	ಪಿಲ್ಲಗಾನಹಳ್ಳಿ	11	5–00	ಗುತ್ತಿಗೆ
		28. ಶಂಕರಾಚಾರ್ಯ ಮಹಾಸಂಸ್ಥಾನ, ದಕ್ಷಿಣಾನ್ಮಯ ಶಾರದಾಪೀಠ ಶೃಂಗೇರಿ	ಉತ್ತರಿ	112, 113	25–00	ಗುತ್ತಿಗೆ
	ಒಟ್ಟು				**362–12**	

ಬೆಂಗಳೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಂಸ್ಥೆಗಳು / ಉದ್ದಿಮೆದಾರರಿಗೆ /ಕೈಗಾರಿಕಾ ಪ್ರದೇಶಗಳಿಗೆ ಸರ್ಕಾರಿ ಜಮೀನನ್ನು ಮಂಜೂರಿ ಮಾಡಿರುವ ತಃಖ್ತೆ

ಕ್ರ. ಸಂ.	ತಾಲ್ಲೂಕಿನ ಹೆಸರು	ಮಂಜೂರು ಮಾಡಿರುವ ಸಂಸ್ಥೆ/ಉದ್ದಿಮೆ/ ಕೈಗಾರಿಕೆ ಹೆಸರು	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ–ಗುಂಟೆ	ಮಂಜೂರಾತಿ ಕ್ರಯ/ ಗುತ್ತಿಗೆ/ ಬಾಡಿಗೆ
1	2	3	4	5	6	7
1.	ಬೆಂಗಳೂರು ಪೂರ್ವ	1. ದೈಹಿಕ ಅಂಗವಿಕಲರ ಸಂಸ್ಥೆ, ಬೆಂಗಳೂರು	ಕ್ಯಾಲಸನಹಳ್ಳಿ	15, 10	5–00	ಗುತ್ತಿಗೆ
		2. ಅಕ್ಷೆಪ್ಟ್ ಸಂಸ್ಥೆ, ಬೆಂಗಳೂರು	ಕ್ಯಾಲಸನಹಳ್ಳಿ	53	3–00	ಗುತ್ತಿಗೆ
		3. ಸೋಸಿಯೋ ಲೀಗಲ್ ಸರ್ವೀಸಸ್ ಅಂಡ್ ರೀಸರ್ಚ್ ಫೌಂಡೇಷನ್, ಬೆಂಗಳೂರು	ಹೊರಮಾವು	110	3–25	ಗುತ್ತಿಗೆ
		4. ಆದ್ಯ ಶಿಕ್ಷಣ ಸಂಸ್ಥೆ, ಬೆಂಗಳೂರು	ಕೊಡತಿ	58/1	4–21	ಗುತ್ತಿಗೆ
		5. ವಿದ್ಯಾಮಾನಸ ಎಜುಕೇಷನ್ ಟ್ರಸ್ಟ್, ಬೆಂಗಳೂರು	ಮಳ್ಳೂರು	48	8–00	ಗುತ್ತಿಗೆ
		6. ಗಾರ್ಡನ್ ಸಿಟಿ ಎಜುಕೇಷನ್ ಟ್ರಸ್ಟ್, ಬೆಂಗಳೂರು	ಭಟ್ಟರಹಳ್ಳಿ	02	0–13	ಗುತ್ತಿಗೆ
		7. ಶ್ರೀ ರಾಜರಾಜೇಶ್ವರಿ ಎಜುಕೇಷನ್ , ಟ್ರಸ್ಟ್, ಬೆಂಗಳೂರು	ಚನ್ನಸಂದ್ರ	115	5–00	ಗುತ್ತಿಗೆ
		8. ಮೆ: ಮದರ್ ಡೈರಿ ಪ್ರೂಟ್ ಅಂಡ್ ವೆಜಿಟೆಬಲ್ಸ್ ಲಿ, ಬೆಂಗಳೂರು	ರಾಜಸೊಣ್ಣೇನಹಳ್ಳಿ	98	3–01	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ

1	2	3	4	5	6	7
		9. ಆರ್ಮಿ ಇನ್ಸಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಅಂಡ್ ಕ್ಯಾಟರಿಂಗ್ ಟೆಕ್ನಾಲಜಿ, ಬೆಂಗಳೂರು	ನಾಗರೇಶ್ವರ ನಾಗೇನಹಳ್ಳಿ	13	12–00	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ
		10. ನ್ಯೂ ಹೊರೈಜನ್ ಎಜುಕೇಷನ್ ಅಂಡ್ ಕಲ್ಚರಲ್ ಟ್ರಸ್ಟ್, ಬೆಂಗಳೂರು	ಕಾಡುಬೀಸನಹಳ್ಳಿ	14	3–12	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ
		11. ಪೇಮನ ಆಶ್ರಮ, ಬೆಂಗಳೂರು	ಬಾಣಸವಾಡಿ	13	0–07	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ
		12. ಮೆ: ಮಾತಾ ಅಮೃತಾನಂದಮಯಿ ಮಠ, ಬೆಂಗಳೂರು	ಕಸವನಹಳ್ಳಿ	26, 27	22–23	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ
		13. ಯೋಗಿ ನಾರಾಯಣ ಎಜುಕೇಷನ್ ಟ್ರಸ್ಟ್ (ರಿ) ಬೆಂಗಳೂರು	ಭಟ್ಟರಹಳ್ಳಿ	59	0–20	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು ಮಂಜೂರು ಮಾಡಿದೆ
		14. ಕರ್ನಾಟಕ ರೆಡ್ಡಿ ಜನ ಸಂಘ, ಬೆಂಗಳೂರು	ಕಸವನಹಳ್ಳಿ	26, 27	20–08	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತಿಗೆ ಜಮೀನು [illegible]

1	2	3	4	5	6	7
		15. ನಾಟ್ಯಶ್ರೀಯ ನೃತ್ಯ ಸಂಘ, ಬೆಂಗಳೂರು	ಹೊರಮಾವು	110	01–00	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತ್ತಿಗೆ ಜಮೀನು ಮಂಜೂರು ಮಾಡಿದೆ
		16. ಬೆಂಗಳೂರು ಮಹಾನಗರ ಪಾಲಿಕೆ	ಮಂಡೂರು	155	169–10	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತ್ತಿಗೆ ಜಮೀನು ಮಂಜೂರು ಮಾಡಿದೆ
		17. ಸನ್ ರೈಸ್ ಕೆಂಪನಿ	ನೆಲ್ಲೂರಹಳ್ಳಿ		16–0	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತ್ತಿಗೆ ಜಮೀನು ಮಂಜೂರು ಮಾಡಿದೆ
		18. ಕೊಳಚೆ ನಿರ್ಮೂಲನಾ ಮಂಡಳಿ	ಸಾದರಮಂಗಲ	53	4–21	ಸರ್ಕಾರಿ ಆದೇಶದಲ್ಲಿ ನಿಗಧಿಪಡಿಸಿದ ಕಿಮ್ಮತ್ತಿಗೆ ಜಮೀನು ಮಂಜೂರು ಮಾಡಿದೆ
	ಒಟ್ಟು				282–11	
5.	ಆನೇಕಲ್	1. ಶ್ರೀ ಸರಸ್ವತಿ ವಿದ್ಯಾನಿಕೇತನ ವಿದ್ಯಾಸಂಸ್ಥೆ ಶಾಲಾ ಕಟ್ಟಡ	ಇಂಡ್ಲುವೆಲೆ	173	0–06	ಮಂಜೂರಿ
		2. ವಿಶೇಷ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೆಂಗಳೂರು ಇವರಿಗೆ ಮೆಗಾ ಮಾರ್ಕೆಟ್ ಸ್ಥಾಪನೆ ಮಾಡಲು	ಗೂಳಿಮಂಗಲ	135 ಮತ್ತು 141	7–07	ಮಂಜೂರಿ

1	2	3	4	5	6	7
		3. ಗೌತಮ್ ಎಜುಕೇಷನ್ ಟ್ರಸ್ಟ್	ಖತುನಹಳ್ಳಿ		0–19	ಗುತ್ತಿಗೆ
		4. ಶ್ರೀ ಮುನೇಶ್ವರ ಸ್ವಾಮಿ ದೇವಸ್ಥಾನದ ಟ್ರಸ್ಟ್ ಕಲ್ಯಾಣ ಮಂಟಪ ಸ್ಥಾಪಿಸಲು	ಸರ್ಜಾಪುರ	ನಂಬರ್ ಕಾಣದ ಖರಾಬು	0–08	ಗುತ್ತಿಗೆ
ಒಟ್ಟು					8–00	

1. ರಾಮನಗರಂ ತಾಲ್ಲೂಕು ಬಿಡದಿ ಹೋಬಳಿ ಕೋಡಿಯಾಲ ಕರೇನಹಳ್ಳಿ ಗ್ರಾಮದ ಸರ್ವೆ ನಂ. 383ರಲ್ಲಿ 0–14 ಗುಂಟೆ ಹೊಸೂರು ಗ್ರಾಮದ ಸರ್ವೆ ನಂ. 72ರಲ್ಲಿ 8.00 ಎಕರೆ ಜಮೀನನ್ನು ಗುತ್ತಿಗೆಗೆ ನೀಡಿದೆ. (ಎಲ್.ಎನ್.ಡಿ. (ರಾ) ಸಿ.ಆರ್. 54/2001–02, ದಿನಾಂಕ 22–1–2004.

2. ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ, ತಾಳೆಕೆರೆ ಗ್ರಾಮದ ಸರ್ವೆ ನಂ. 141ರಲ್ಲ 8–01 ಎಕರೆ ಜಮೀನನ್ನು ಶ್ರೀ ಆದಿಚುಂಚನಗಿರಿ ಟ್ರಸ್ಟ್ ಗುತ್ತಿಗೆಗೆ ನೀಡಿದೆ. (ನಂ. ಎಲ್.ಎನ್.ಡಿ. (ಎಂ) ಸಿ.ಆರ್/21/1997–98 ದಿನಾಂಕ 17–12–2003)

3. ಕನಕಪುರ ತಾಲ್ಲೂಕು ಮರಳವಾಡಿ ಹೋಬಳಿ ಜಕ್ಕಸಂದ್ರ ಗ್ರಾಮದ ಸರ್ವೆ ನಂ. 64ರಲ್ಲಿ 11–10 ಗುಂಟೆ 152ರಲ್ಲಿ 5.19 ಗುಂಟೆ ಹಾಗೂ ಸರ್ವೆ ನಂ. 195ರಲ್ಲಿ 5.00 ಎಕರೆ ಒಟ್ಟು 26.12 ಗುಂಟೆ ಜಮೀನನ್ನು ಶ್ರೀ ಭಗವಾನ್ ಮಹಾವೀರ್ ಜೈನ್ ಇಂಡಿಯಾ ಸಂಸ್ಥೆ ಬೆಂಗಳೂರುರವರಿಗೆ ಶುದ್ಧ ಕ್ರಯಕ್ಕೆ ನೀಡಿದೆ. (ನಂ. ಎಲ್ಎನ್‌ಡಿ (ಕ) ಸಿಆರ್ 56/2002–03, ದಿನಾಂಕ 24–6–2004.

4. ಕನಕಪುರ ತಾಲ್ಲೂಕು ಹಾರೋಶಿವನಹಳ್ಳಿ ಗ್ರಾಮದ ಸರ್ವೆ ನಂ. 31ರಲ್ಲಿ 1.05 ಗುಂಟೆ ಪುರುಷಗೊಂಡನಹಳ್ಳಿ ಸರ್ವೆ ನಂ. 17ರಲ್ಲಿ 2.10 ಗುಂಟೆ ಒಟ್ಟು 3.15 ಗುಂಟೆ ಜಮೀನನ್ನು ಶ್ರೀ ಸಾಯಿ ಸ್ಫೂರ್ತಿ ಪವರ್ ಪ್ರೈ ಲಿ. ಕಂಪನಿ, ಕರ್ನಾಟಕ ರಿನ್ಯಾಯಬಲ್ ಎನರ್ಜಿ ಡೆವಲಪ್‌ಮೆಂಟ್ ಲಿಮಿಟೆಡ್‌ರವರಿಗೆ ಕಿರುಜಲ ವಿದ್ಯುತ್ ಯೋಜನೆಗೆ ಗುತ್ತಿಗೆಗೆ ನೀಡಿದೆ. (ನಂ. ಎಲ್ಎನ್‌ಡಿ (ಕ) ಸಿಆರ್ 78/2002–03 ದಿನಾಂಕ 21–8–2003).

5. ಹೊಸಕೋಟೆ ತಾಲ್ಲೂಕು ಎಂ. ಸತ್ಯವಾರ ಗ್ರಾಮದ ಸ.ನಂ. 1ರಲ್ಲಿ 2–00 ಎಕರೆ ಜಮೀನನ್ನು (ಅಂಗವಿಕಲ, ಕಿವುಡು, ಮೂಗು ಹಾಗೂ ದುರ್ಬಲರ ಅಭಿವೃದ್ಧಿ ಕಾರ್ಯಗಳಿಗಾಗಿ) ಶ್ರೀ ಭೈರವೇಶ್ವರ ಆಶ್ರಮ ಟ್ರಸ್ಟ್‌ರವರಿಗೆ ಗುತ್ತಿಗೆಗೆ ನೀಡಿದೆ. (ನಂ. ಎಲ್ಎನ್‌ಡಿ (ಹೊ) ಸಿಆರ್ 43/03–04)

6. ಹೊಸಕೋಟೆ ತಾಲ್ಲೂಕು, ನಂದಗುಡಿ ಹೋಬಳಿ, ನಂದಗುಡಿ ಸ.ನಂ. 126ರಲ್ಲಿ 0–28 ಗುಂಟೆ ಜಮೀನನ್ನು ಈದ್ಗಾ ಮೈದಾನಕ್ಕೆ ಕ್ರಯಕ್ಕೆ ಮಂಜೂರಿ ಮಾಡಿದೆ. (ನಂ. ಎಲ್ಎನ್‌ಡಿಸಿಆರ್ 47/03–04).

7. ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಕೋಡಗುರ್ಕಿ ಗ್ರಾಮದ ಸ.ನಂ. 52ರಲ್ಲಿ 5–00 ಎಕರೆ ಜಮೀನನ್ನು ವೀರಬ್ರಹ್ಮೇಂದ್ರಮಧ್ವಿರಾದ ಪ್ರೇತಲೂರು ಸಂಸ್ಥೆಗೆ ಗುತ್ತಗೆಗೆ ನೀಡಿದೆ. (ಎಲ್ಎನ್‌ಡಿ (ದೇ) ಸಿಆರ್ 183/02–03.

8. ದೇವನಹಳ್ಳಿ ತಾಲ್ಲೂಕು, ಬೆಟ್ಟಕೋಟೆ ಗ್ರಾಮದ ಸ.ನಂ. 235ರಲ್ಲಿ 30–00 ಎಕರೆ ಅರಿಶಿನಕುಂಟೆ ಗ್ರಾಮದ ಸ.ನಂ. 98ರಲ್ಲಿ 25–15 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಬಂಡವಾಳ ಮತ್ತು ಅಭಿವೃದ್ಧಿ ನಿಗಮ ನಿಯಮಿತರವರಿಗೆ ಕ್ರಯಕ್ಕೆ ನೀಡಿದೆ.

ಉಡುಪಿ ಜಿಲ್ಲೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತಯಾರಿಕಾ ಕೇಂದ್ರಗಳು

207 (374) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವ ಕೇಂದ್ರಗಳು ಉಡುಪಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡುತ್ತಿದ್ದು ಈಗಾಗಲೇ ಇಂತಹ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ: (ಸಂಪೂರ್ಣ ಮಾಹಿತಿಯೊಂದಿಗೆ ಕ್ಷೇತ್ರವಾರು ವಿವರ ನೀಡುವುದು);

ಆ) ಈ ಸಂಬಂಧ ವಿಶೇಷ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಅಗತ್ಯ ಕ್ರಮ ಕೈಗೊಳ್ಳಲಾಗುವುದೆ:

ಇ) ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟದ ಜಾಲವು ಹೆಚ್ಚಾಗುತ್ತಿದ್ದು ಇವುಗಳನ್ನು ತಡೆಯುವಲ್ಲಿ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು)

ಅ) ಉಡುಪಿ ಜಿಲ್ಲೆಯಲ್ಲಿ ಅಕ್ರಮ ಕಳ್ಳಭಟ್ಟಿ ಸಾರಾಯಿ ತಯಾರಿಸುತ್ತಿರುವ ಕೇಂದ್ರಗಳ ಮೇಲೆ ಅಬಕಾರಿ ವರ್ಷ 2003–04ರಲ್ಲಿ 1312 ದಾಳಿಗಳನ್ನು ನಡೆಸಿ ಒಟ್ಟು 7 ಪ್ರಕರಣಗಳನ್ನು ಪತ್ತೆ ಹಚ್ಚಿ 6 ವ್ಯಕ್ತಿಗಳನ್ನು ಬಂಧಿಸಿ 319 ಲೀಟರ್ ಕಳ್ಳಭಟ್ಟಿ ಸಾರಾಯಿ ವಶಪಡಿಸಿಕೊಳ್ಳಲಾಗಿದೆ. ಅಲ್ಲದೇ 525 ಲೀಟರ್ ನಕಲಿ ಸಾರಾಯಿ ಮತ್ತು 915 ಲೀಟರ್ ಕೊಳೆಯನ್ನು ನಾಶಪಡಿಸಲಾಗಿದೆ. ದಾಖಲಿಸಿದ ಮೊಕದ್ದಮೆ ಮತ್ತು ವಶಪಡಿಸಿಕೊಂಡ ಕಳ್ಳಭಟ್ಟಿ ಸಾರಾಯಿಯ ಕ್ಷೇತ್ರವಾರು ಮಾಹಿತಿಯನ್ನು ಅನುಬಂಧ–'ಅ' ರಲ್ಲಿ ನೀಡಲಾಗಿದೆ.

ಆ) ಹೌದು. ಈ ಸಂಬಂಧ ವಿಶೇಷ ತನಿಖೆ ಹಾಗೂ ದಾಳಿ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ.

ಇ) ಹೌದು. ರಾಜ್ಯದಲ್ಲಿ ಅಕ್ರಮ ಮದ್ಯ ಮಾರಾಟವನ್ನು ನಿಯಂತ್ರಿಸುವ ದಿಸೆಯಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮವನ್ನು ಸ್ಥಾಪಿಸಿದ್ದು ಭಾರತೀಯ ಮದ್ಯ ವಹಿವಾಟಿನಲ್ಲಿ ಅಕ್ರಮ ಚಟುವಟಿಕೆಯನ್ನು ಬಹು ಮಟ್ಟಿಗೆ ನಿಯಂತ್ರಿಸಲಾಗಿದೆ. ಸಾರಾಯಿ ಮಾರಾಟ ವಿಭಾಗದಲ್ಲೂ ಸಹ ಸೆಕೆಂಡ್ಸ್ ಹಾವಳಿ ಇದ್ದು ಇದನ್ನು ತಡೆಗಟ್ಟುವ ದಿಸೆಯಲ್ಲಿ 2004–05ನೆ ಸಾಲಿನ ಆಯವ್ಯಯದಲ್ಲಿ ಸುಧಾರಣಾ ಕ್ರಮಗಳನ್ನು ಮಂಡಿಸಲಾಗಿದೆ.

ರಾಜ್ಯದಲ್ಲಿ ವ್ಯಾಪಕವಾಗಿ ಹೆಚ್ಚುತ್ತಿರುವ 'ಕಳ್ಳಭಟ್ಟಿಯ ನಿಯಂತ್ರಣಕ್ಕಾಗಿ ಹಾಗೂ ತೆರಿಗೆ ರಹಿತ ಮದ್ಯದ ವ್ಯವಹಾರವನ್ನು ತಡೆಗಟ್ಟುವ ಸಲುವಾಗಿ ಅಬಕಾರಿ ಇಲಾಖೆಯು ನಿರಂತರವಾಗಿ ದಾಳಿಗಳನ್ನು ನಡೆಸುತ್ತಿದೆ. ಅಗತ್ಯ ಇದ್ದಾಗಲೆಲ್ಲಾ ಪೊಲೀಸ್ ಇಲಾಖೆಯ ಸಹಕಾರವನ್ನು ಪಡೆದು ಸಂಯುಕ್ತ ದಾಳಿ ನಡೆಸಲಾಗುತ್ತದೆ. ವಿಚಕ್ಷಣೆಯನ್ನು ಚುರುಕುಗೊಳಿಸಿ ವಿಶೇಷ ತನಿಖೆ, ರಸ್ತೆಗಸ್ತು, ಜಾರಿ ಮತ್ತು ತಪಾಸಣೆಗಳನ್ನು ಕೈಗೊಂಡು ಅಕ್ರಮ ಮದ್ಯ ಮಾರಾಟ ಮಾಡುವವರ ವಿರುದ್ಧ ಹಾಗೂ ತಪ್ಪಿತಸ್ಥರ ಮೇಲೆ ಕಾನೂನಿನ ಪ್ರಕಾರ ಮೊಕದ್ದಮೆ ಹೂಡಿ ಕ್ರಮ ಕೈಗೊಳ್ಳಲಾಗುತ್ತಿದೆ.